**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 25/2025**

**ಚಾ.ಸಾಃ 15, ಪ್ರಾ.ಸಾಃ 7**

| | |
|---|---|
| ಸಾಕ್ಷಿದಾರನ ಹೆಸರು | ಮಮತಾ ನಾಯ್ಕ |
| ತಂದೆಯ ಹೆಸರು | ಶಂಕರ ನಾಯ್ಕ |
| ವಯಸ್ಸು | 33 ವರ್ಷಗಳು |
| ಉದ್ಯೋಗ | ಪಿ.ಎಸ್.ಐ. ಹೊನ್ನಾವರ ಸಂಚಾರ |
| ವಾಸ್ತವ್ಯ | ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 13-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 19-08-2023 ರಿಂದ ಹೊನ್ನಾವರ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 01-01-2025 ರಂದು ಚಾಸಾ-18 ರವರು ಈ ಪ್ರಕರಣದಲ್ಲಿ ಸ್ಥಳ ಪಂಚನಾಮೆ ಕೈಗೊಂಡು ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸುವಂತೆ ಜ್ಞಾಪನ ನೀಡಿರುತ್ತಾರೆ. ಅದರಂತೆ ದಿನಾಂಕ 03-01-2025 ರಂದು ಸಂಜೆ 05-30 ರಿಂದ 07-00 ಗಂಟೆ ಸಮಯದಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಅಪಘಾತದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-7 ರವರು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಪಂಚನಾಮೆಯ ಕಾಲಕ್ಕೆ ಅಪಘಾತಪಡಿಸಿದ ಆಟೋ ಸ್ಥಳದಲ್ಲೇ ಇದ್ದು ಅದನ್ನು ಅಮಾನತ್ತುಪಡಿಸಿಕೊಂಡು ಫೋಟೋ ತೆಗೆಸಿರುತ್ತೇನೆ. ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು, ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು, ಫೋಟೋಗಳನ್ನು ನೋಡುತ್ತಿದ್ದು ನಿಪಿ-3 ರಿಂದ 7 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ-7 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಪಂಚನಾಮೆ, ಕಚ್ಚಾ ನಕಾಶೆ, ಫೋಟೋ ಹಾಗೂ ಚಾಸಾ-7 ರವರ ಹೇಳಿಕೆಗಳನ್ನು ಠಾಣಾಧಿಕಾರಿಯವರಿಗೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಪಂಚನಾಮೆ ತಯಾರಿಸಲು ಚಾಸಾ-7 ರವರು ಮತ್ತು ಸ್ಥಳದಲ್ಲಿ ಹಾಜರಿದ್ದ ಪಂಚರು ಮಾಹಿತಿ ನೀಡಿರುತ್ತಾರೆ. ನಾನು ಸ್ಥಳಕ್ಕೆ ಭೇಟಿ ನೀಡಿದಾಗ ಅಪಘಾತಪಡಿಸಿದ ಆಟೋ ಅಪಘಾತ ಸ್ಥಳದಿಂದ ಸುಮಾರು 20 ಅಡಿ ದೂರದಲ್ಲಿ ರಸ್ತೆ ಪಕ್ಕದಲ್ಲಿ ನಿಲ್ಲಿಸಲಾಗಿತ್ತು. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿ ಯಾವುದೇ ಪಂಚನಾಮೆ ಮತ್ತು ಕಚ್ಚಾ ನಕಾಶೆ ತಯಾರಿಸಿಲ್ಲ, ಠಾಣೆಯಲ್ಲೇ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-7 ರವರು ನನಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/-

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**Co-ordinator** **ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**